# IN THE COURT OF THE ADDL. SENIOR CIVIL JUDGE & JMFC., GUBBI

# **OS – 108/2022**

Witness present and duly sworn on : 03.02.2024.

Cross Examination: by Counsel for Defendant No.9 :

ನನ್ನ ಪ್ರಮಾಣ ಪತ್ರದ ವಿಚಾರಗಳು ನನಗೆ ಗೊತ್ತು. ಕೆಂಪಮ್ಮ ನನ್ನ ದೊಡಪ್ಪನ ಮಗಳು. ನಾವು ಈ ದಾವೆಯನ್ನು 52 ಆಸ್ತಿಗಳ ಮೇಲೆ ಹಾಕಿರುತ್ತೇವೆ. ಸದರಿ ಆಸ್ತಿಗಳು ಯಾವ ಊರಿನಲ್ಲಿ ಇದೆ ಎಂದು ನಿಖರವಾಗಿ ಹೇಳಲು ಆಗುವುದಿಲ್ಲ ಆದರೆ ಅವುಗಳು ಕೆಂಚನಹಳ್ಳಿ ಗ್ರಾಮ, ಸಿ.ಎಸ್.ಪುರ ಅಮಾನಿಕೆರೆ ಯಲ್ಲಿ ಇರುತ್ತವೆ. ವಾದಿ ಮತ್ತು ಪ್ರತಿವಾದಿಗಳ ಒಟ್ಟು ಕುಟುಂಬದ ಮೂಲ ಪುರುಷ ಕೆಂಪೆಗೌಡ. ಸದರಿ ಕೆಂಪೆಗೌಡರವರಿಗೆ ಇಬ್ಬರು ಗಂಡು ಮಕ್ಕಳು. ಅವರುಗಳು ಮಾಸೇಗೌಡ ಮತ್ತು ರಂಗೇಗೌಡ. ಸದರಿ ಮಾಸೇಗೌಡರವರಿಗೆ ಮೂರು ಜನ ಗಂಡು ಮಕ್ಕಳು. ಅವರುಗಳು ಕೆಂಪೆಗೌಡ, ಗೋವಿಂದಪ್ಪ ಮತ್ತು ರಂಗೇಗೌಡ. ರಂಗೇಗೌಡ ಬಿನ್ ಕೆಂಪಗೌಡರವರಿಗೆ ಒಬ್ಬರೆ ಮಗ ಅವರು ಬೋರಯ್ಯ. ಮೊದಲನೇ ವಾದಿ ಸದರಿ ಬೋರಯ್ಯನವರ ಮಗ. 2 ಮತ್ತು 3 ನೇ ವಾದಿಯು 1 ನೇ ವಾದಿಯ ಮಕ್ಕಳು. ಮಾಸೇಗೌಡ ಮತ್ತು ರಂಗೇಗೌಡರವರಿಗೆ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳಾಗಿದ್ದವು. ಮಾಸೇಗೌಡ ಮತ್ತು ರಂಗೇಗೌಡರವರು ಯಾವಾಗ ಮರಣ ಹೊಂದಿದ್ದಾರೆ ಎಂದರೆ ದಿನಾಂಕ ಗೊತ್ತಿಲ್ಲ ಆದರೆ ಸುಮಾರು 79-80 ವರ್ಷಗಳ ಹಿಂದೆ ಅವರುಗಳು ಮರಣ ಹೊಂದಿದ್ದಾರೆ. ಮಾಸೇಗೌಡ ಮತ್ತು ರಂಗೇಗೌಡ ರವರು ವಿಭಾಗ ಮಾಡಿಕೊಂಡಿರಲಿಲ್ಲ. ಅವರಿಬ್ಬರು ಬಾಯಿ ಮಾತಿನ ವಿಭಾಗ ಮಾಡಿಕೊಂಡು ಪ್ರತ್ಯೇಕವಾಗಿ ವಾಸ ಇದ್ದಾರೆ ಎಂದರೆ ಸರಿಯಲ್ಲ.

ಕೆಂಪೆಗೌಡ ಬಿನ್ ಕೆಂಪೇಗೌಡ ರವರ 5 ನೇ ಮಗಳು ಕೆಂಪಮ್ಮ. ನಮ್ಮ ಕುಟುಂಬದ ವಂಶವೃಕ್ಷವನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದೇನೆ. ಮಾಸೇಗೌಡ ಮತ್ತು ರಂಗೇಗೌಡರವರು ವಿಭಾಗ ಮಾಡಿಕೊಂಡು ಪ್ರತ್ಯೇಕವಾಗಿ ವಾಸ ಇದ್ದರು ಸಹ ನಾವೆಲ್ಲರೂ ಒಟ್ಟು ಕುಟುಂಬದ ಸದಸ್ಯರು ಎಂದು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಹಾಜರುಪಡಿಸಿದ್ದೇನೆಂದರೆ ಸರಿಯಲ್ಲ. ಮಾಸೇಗೌಡರವರು ವಿಭಾಗ ಮಾಡಿಕೊಂಡು

ಸ್ವಾಧೀನದಲ್ಲಿದ್ದ ದಾವಾ ಆಸ್ತಿಗಳು ಪ್ರತ್ಯೇಕವಾಗಿ ಇದ್ದು, ಅವರುಗಳು ವಿಭಾಗ ಕೋರಿ OS No.45/2021 ಗುಬ್ಬಿ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿ. ಕೆಂಪಮ್ಮ ನವರು ಅವರ ಅಣ್ಣಂದಿರ ವಿರುದ್ದ ವಿಭಾಗ ಕೋರಿ ಸದರಿ ದಾವೆ ಸಲ್ಲಿಸಿದ್ದಾರೆ. ಸದರಿ ದಾವೆಯಲ್ಲಿ ಸರ್ವೆ ನಂ.2/2 ಬಿ ಯಲ್ಲಿ 33 ಗುಂಟೆ , ಸರ್ವೆ ನಂ.5/2 ರಲ್ಲಿ 19 ಗುಂಟೆ, ಸರ್ವೆ ನಂ.85/2 ರಲ್ಲಿ 15 ಎಕರೆ 12 ಗುಂಟೆ , ಸರ್ವೆ ನಂ.11/3 ರಲ್ಲಿ 19 ಗುಂಟೆ, ಸರ್ವೆ ನಂ.122/3 ರಲ್ಲಿ 25 ಗುಂಟೆ, ಸರ್ವೆ ನಂ.90/3 ರಲ್ಲಿ 1 ಎಕರೆ 20 ಗುಂಟೆ, ಸರ್ವೆ ನಂ.94/3 ರಲ್ಲಿ 1 ಎಕರೆ 11 ½ ಗುಂಟೆ, ಸರ್ವೆ ನಂ.107/3 ಎ ನಲ್ಲಿ 1 ಎಕರೆ 12 ಗುಂಟೆ, ಸೆರ್ವೆ ನಂ.93/4 ರಲ್ಲಿ 33 ½ ಗುಂಟೆ, ಸರ್ವೆ ನಂ.105/6 ರಲ್ಲಿ 15 ಗುಂಟೆ, ಸರ್ವೆ ನಂ.119/6 ರಲ್ಲಿ 2 ಎಕರೆ 1 ಗುಂಟೆ, ಸರ್ವೆ ನಂ.113 ರಲ್ಲಿ 2 ಎಕರೆ 33 ಗುಂಟೆ, ಸರ್ವೆ ನಂ.114 ರಲ್ಲಿ 5 ಎಕರೆ 7 ಗುಂಟೆ, ಸರ್ವೆ ನಂ.139 ರಲ್ಲಿ 15 ಗುಂಟೆ, ಸರ್ವೆ ನಂ.140 ರಲ್ಲಿ 16 ಗುಂಟೆ, ಸರ್ವೆ ನಂ.141 ರಲ್ಲಿ 8 ಗುಂಟೆ, ಸರ್ವೆ ನಂ.3 ರಲ್ಲಿ 1 ಎಕರೆ 13 ಗುಂಟೆ, ಸರ್ವೆ ನಂ.54 ರಲ್ಲಿ 12 ಎಕರೆ 39 ಗುಂಟೆ, ಸರ್ವೆ ನಂ.77 ರಲ್ಲಿ 3 ಎಕರೆ 35 ಗುಂಟೆ, ಸರ್ವೆ ನಂ.88 ರಲ್ಲಿ 2 ಎಕರೆ 20 ಗುಂಟೆ, ಸರ್ವೆ ನಂ.118/1 ರಲ್ಲಿ 1 ಎಕರೆ 13 ಗುಂಟೆ, ಸರ್ವೆ ನಂ.164/1 ರಲ್ಲಿ 6 ಎಕರೆ, ಸರ್ವೆ ನಂ.85/1 ರಲ್ಲಿ 8 ಎಕರೆ 21 ಗುಂಟೆ, ಸರ್ವೆ ನಂ.119/2 ರಲ್ಲಿ 18 ಗುಂಟೆ, ಸರ್ವೆ ನಂ.93/6 ರಲ್ಲಿ 27 ಗುಂಟೆ ಕೆಂಚನಹಳ್ಳಿ ಗ್ರಾಮದ ಜಮೀನುಗಳ ವಿರುದ್ದ ಸಲಿಸಿದ್ದು, ಸದರಿ ಆಸ್ತಿಗಳು ಮಾಸೇಗೌಡರವರ ಆಸ್ತಿಗಳು ಎಂದರೆ ಸರಿಯಲ್ಲ.

ಮಾಸೇಗೌಡರವರ ನಂತರ ಕೆಂಪೆಗೌಡರವರು ಆಸ್ತಿಗಳ ಸ್ವಾಧೀನದಲ್ಲಿದ್ದು, ಕೆಂಪೆಗೌಡರವರ ನಂತರ ಅವರ ಮಕ್ಕಳಾದ ಕೆಂಪೆಗೌಡ @ ಸುಬ್ಬಣ್ಣ, ಜಯಮ್ಮ, ಕೆಂಪೆಗೌಡ, ಜಯರಾಮು, ಕೆಂಪಮ್ಮ, ಮಾಸೇಗೌಡ ಮತ್ತು ಕೆಂಪಮ್ಮ ನವರು ಆಸ್ಥಿಗಳ ಸ್ವಾಧೀನದಲ್ಲಿ ಇದ್ದರು ಎಂದರೆ ಸರಿಯಲ್ಲ. ಸದರಿ ಆಸ್ತಿಗಳಲ್ಲಿ ಅವರುಗಳು ಜಂಟಿ ಸ್ವಾಧೀನದಲ್ಲಿ ಇರುವ ಕಾರಣ ಅವರು ವಿಭಾಗ ಕೋರಿ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ.

ರಂಗೇಗೌಡರವರ ವಾರಸುದಾರರು ಇತರೆ ಆಸ್ತಿಗಳ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಅಭಿವೃದ್ದಿ ಪಡಿಸಲು ಕೆಲವು ಆಸ್ತಿಗಳ ಸ್ವಾಧೀನದಲ್ಲಿ ಇದ್ದಾರೆ. ನಮ್ಮ ಕುಟುಂಬದಲ್ಲಿ ಕೆಂಪೆಗೌಡ, ಕೆಂಪಮ್ಮ, ರಂಗೇಗೌಡ ಎಂಬ ಹೆಸರಿನ ಸದಸ್ಯರು ಹೆಚ್ಚು ಇರುವ ಕಾರಣ ನಾವು

ದಾವಾ ಆಸ್ತಿಗಳ ಮೇಲೆ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

(Further cross examination deferred at the request of counsel for the defendant No.9.)

(Typed to my dictation in open court)

R.O.I & A.C.

Addl. Senior Civil Judge and
JMFC., Gubbi